ಇಂದು ದಿನಾಂಕಃ 06.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ವಾದಿಯ ಪರ ಶ್ರೀ. ಎನ್.ಆರ್.ಕೆ. ವಕೀಲರಿಂದಃ

ಮುಂದುವರೆದು ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನನ್ನ ಪರವಾಗಿ ಗುರುತಿಸಬೇಕೆಂದು ಕೋರುತ್ತೇನೆ.

ದಿನಾಂಕಃ 12.07.2025 ರ ವಾದಿಯು ಹಾಜರುಪಡಿಸಿದ ಉದಯವಾಣಿ ದಿನಪತ್ರಿಕೆಯನ್ನು ನಿಪಿ-7 ಎಂದು ಮತ್ತು ಪ್ರಕಟಣೆಯ ಭಾಗವನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ಮಾನ್ಯ ಎಜಿಪಿ ಅವರಿಂದಃ

1. ನನಗೆ 4 ಜನ ಮಕ್ಕಳು, ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ನೀವು ಈಗ 4 ಜನ ಮಕ್ಕಳೊಂದಿಗೆ ಇರುತ್ತೀರಿ ಎಂದರೆ ಸಾಕ್ಷಿಯು ಒಬ್ಬ ಮಗ ಹೋಗಿದ್ದು, ಮೂರು ಜನ ಮಕ್ಕಳೊಂದಿಗೆ ಇರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮಗ ಚಂದ್ರಪ್ಪ ಹೋಗಿರುತ್ತಾನೆ. ನನ್ನ ಮಗ ಚಂದ್ರಪ್ಪ ರಟ್ಟೀಹಳ್ಳಿಯಲ್ಲಿ ಓದುತ್ತಿದ್ದ. ನನ್ನ ಮಗ ಹೋಗಿ 15 ವರ್ಷಗಳಾಗಿರುತ್ತವೆ. ನನ್ನ ಮಗ ನಮ್ಮ ಜೊತೆಗಿದ್ದಾಗ ಆರೋಗ್ಯವಾಗಿ ಚೆನ್ನಾಗಿದ್ದ ಎಂದರೆ ಸರಿ. ನನ್ನ ಮಗ ನಮ್ಮ ಜೊತೆ ಇದ್ದಾಗ ಎಲ್ಲಿಯೂ ಹೋಗುತ್ತಿರಲಿಲ್ಲ ಎಂದರೆ ಸರಿ. ಹಲಗೇರಿ ಗ್ರಾಮದಲ್ಲಿ ನನ್ನ ತಂಗಿ ಇರುತ್ತಾಳೆ. ನನ್ನ ಮಗ ಹಲಗೇರಿ ಗ್ರಾಮಕ್ಕೆ ಹೋಗುತ್ತೇನೆ ಎಂದು ಹೇಳಿ ಹೋಗಿದ್ದು, ವಾಪಸ್ಸು ಬಂದಿರುವುದಿಲ್ಲ ಎಂದರೆ ಸರಿ.

2. ನನ್ನ ಸಂಬಂಧಿಕರು ಹಲಗೇರಿ, ಮುದೇನೂರು ಮತ್ತು ರಟ್ಟೀಹಳ್ಳಿಯಲ್ಲಿ ಇರುತ್ತಾರೆ. ನನ್ನ ಮಗ ಹೋದಾಗ ನಾನು ಫೋನ್ ಮಾಡಿದ್ದು, ಸ್ವಿಚ್ ಆಫ್ ಬಂದಿತ್ತು, ಬರುತ್ತಾನೆ ಎಂದು ಸುಮ್ಮನಾದೆವು. ನಾವು ನನ್ನ ಮಗನನ್ನು ಎಲ್ಲಾ ಕಡೆ ಸುಮಾರು ದಿನ ಹುಡುಕಿರುತ್ತೇವೆ. ನಂತರ ನಾವು ರಟ್ಟೀಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರನ್ನು ಕೊಟ್ಟಿರುತ್ತೇವೆ. ದೂರನ್ನು ಕೊಟ್ಟ ನಂತರ ನನ್ನ ಮಗ ಎಲ್ಲಿಯೂ ಸಿಕ್ಕಿರುವುದಿಲ್ಲ. ಕಾಣೆಯಾದ ನನ್ನ ಮಗನಿಗೆ ಮದುವೆ ಆಗಿರಲಿಲ್ಲ. ನನ್ನ ಗಂಡ ಹಾಗೂ ಅವರ ಸಹೋದರರೊಂದಿಗೆ 5 ಎಕರೆ ಹೊಲ ಜಂಟಿ ಇರುತ್ತದೆ. ಹಾಗೂ ರಟ್ಟೀಹಳ್ಳಿಯಲ್ಲಿ ಖಾಲಿ ಜಾಗ ಇರುತ್ತದೆ.

3. ಸದರಿ ಆಸ್ತಿಯ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಅದು ಜಂಟಿ ಇದ್ದು, ನನ್ನ ಗಂಡನ ಹೆಸರಿನಿಂದ ಮಕ್ಕಳ ಹೆಸರಿಗೆ ಖಾತೆ ಬದಲಾವಣೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಮಗ ಕಾಣೆಯಾದ ಕೂಡಲೇ ನಾವು ಪತ್ರಿಕಾ ಪ್ರಕಟಣೆ ಮಾಡಿರುವುದಿಲ್ಲ. ಆ ರೀತಿ ಪತ್ರಿಕಾ ಪ್ರಕಟಣೆ ಹೊರಡಿಸಿದ್ದರೆ ಅದನ್ನು ನೋಡಿ ಮಗ ವಾಪಸ್ಸು ಬರುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ ಹಲಗೇರಿ ಗ್ರಾಮಕ್ಕೆ ಹೋಗಿಯೇ ಕಾಣೆಯಾಗಿರುತ್ತಾನೆ ಎಂದರೆ ಸರಿ. ಹಲಗೇರಿಯ ನನ್ನ ತಂಗಿಗೆ ಕರೆ ಮಾಡಿ, ನನ್ನ ಮಗ ಬಂದಿರುತ್ತಾನೆಯೇ ಎಂದು ಕೇಳಿರುತ್ತೇವೆ. ನನ್ನ ಮಗ ಹಲಗೇರಿಗೆ ಹೋಗಿ ಕಾಣೆಯಾಗಿರುವುದರಿಂದ ಹಲಗೇರಿಯ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ, ಜನನ ಮರಣ ನೊಂದಣಾಧಿಕಾರಿ ಹಾಗೂ ತಹಶೀಲ್ದಾರ ರಾಣೇಬೆನ್ನೂರು ಹಾಗೂ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಇವರು ಸದರಿ ದಾವೆಗೆ ಅವಶ್ಯಕ ಪಕ್ಷಗಾರರು ಎಂದರೆ ನನಗೆ ಗೊತ್ತಿಲ್ಲ. ಸದರಿಯವರನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ದಾವೆ ನಡೆಯಲಾರದು ಎಂದರೆ ನನಗೆ ಗೊತ್ತಿಲ್ಲ.

4. ಸದರಿ ದಾವೆ ಹೂಡುವ ಮೊದಲು ಪ್ರತಿವಾದಿಯರು ಸಾರ್ವಜನಿಕ ಅಧಿಕಾರಿಗಳಿರುವುದರಿಂದ ಅವರಿಗೆ ಕಲಂ 80 ರಡಿಯಲ್ಲಿ ನೋಟೀಸ್ ನೀಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ನೋಟೀಸ್ ಕೊಡದ ಕಾರಣ ನ್ಯಾಯಾಲಯಕ್ಕೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿರುತ್ತೀರಾ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ನೋಟೀಸ್ ಕೊಡದೇ ಹಾಗೂ ನ್ಯಾಯಾಲಯಕ್ಕೆ ವಿನಾಯಿತಿ ಅರ್ಜಿ ಸಲ್ಲಿಸದೇ ಸದರಿ ದಾವೆ ಕಾನೂನಿನಲ್ಲಿ ಊರ್ಜಿತವಾಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗ 2 ನೇ ಪ್ರತಿವಾದಿಯ ಅಧಿಕಾರ ವ್ಯಾಪ್ತಿಯಲ್ಲಿ ಕಾಣೆಯಾಗದ ಕಾರಣ ಹಾಗೂ ದಿನಾಂಕ, ಸ್ಥಳ ಮತ್ತು ಸಮಯ ಇಲ್ಲದೇ ಇರುವ ಕಾರಣ ಸದರಿ ಕಛೇರಿ ವ್ಯಾಪ್ತಿಯಲ್ಲಿ ನನ್ನ ಮಗನ ಮರಣ ನೊಂದಣಿ ಮಾಡಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ವ್ಯಕ್ತಿಯು ಬದುಕಿರುತ್ತಾನೋ ಅಥವಾ ಇಲ್ಲ ಎಂದು ಗೊತ್ತಿಲ್ಲದಿದ್ದಾಗ ಮತ್ತು ಸರಿಯಾದ ದಿನಾಂಕ, ವೇಳೆ ಇರದ ಕಾರಣ ಆ ವ್ಯಕ್ತಿಯ ಬಗ್ಗೆ ಮರಣ ನೊಂದಣಿ ದಾಖಲು ಮಾಡಿ, ಮರಣ ಪ್ರಮಾಣ ಪತ್ರ ಕೊಡಲು 2 ನೇ ಪ್ರತಿವಾದಿಯ ಕಚೇರಿ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದರೆ ಗೊತ್ತಿಲ್ಲ. ನನ್ನ ಮಗ ಸದರಿ ನ್ಯಾಯಾಲಯದ ವ್ಯಾಪ್ತಿಯಲ್ಲಿ ಕಾಣೆಯಾಗಿರದ ಕಾರಣ ಸದರಿ ದಾವೆಯನ್ನು ನಿರ್ಣಯಿಸಲು ಈ ನ್ಯಾಯಾಲಯಕ್ಕೆ ಅಧಿಕಾರ ಇಲ್ಲ ಎಂದರೆ ಗೊತ್ತಿಲ್ಲ. ಸದರಿ ದಾವೆಗೆ ಕಾಲಪರಿಮಿತಿ ಭಾದೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ., ಸಂಚಾರಿ
ನ್ಯಾಯಪೀಠ ರಟ್ಟೀಹಳ್ಳಿ .